ಎಲ್.ಎ.ಸಿ.ನಂ.2048/2022
ಪಿ.ಡಬ್ಲ್ಯೂ: 01

**<u>ಸಾಕ್ಷಿಯನ್ನು ಇಂದು ದಿ.02.09.2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**
**<u>ಪಾಟೀ ಸವಾಲುಃ ಶ್ರೀ.MGP., ವಕೀಲರಿಂದ 2 ನೇ ಎದುರುದಾರರ ಪರವಾಗಿಃ</u>**

1) ನನ್ನ ಜಮೀನು ಸರ್ವೆ ನಂ.86/3 ಇದ್ದು, ಅದರಲ್ಲಿ 05 ಗುಂಟೆ ಜಮೀನು ಸ್ವಾಧೀನಗೊಂಡಿರುತ್ತದೆ. ಅದರಲ್ಲಿ 02 ಗುಂಟೆ ಅ ಖರಾಬ ಇರುತ್ತದೆ.

2) **ನಾನು ಈ ಪ್ರಕರಣವಲ್ಲದೇ ಬೇರೆ ಯಾವುದೇ ನ್ಯಾಯಾಲಯದಲ್ಲಿ ನನ್ನ ಸ್ವಾಧೀನಗೊಂಡ ಜಮೀನಿಗೆ ಸಂಬಂಧಿಸಿದಂತೆ ಹೆಚ್ಚುವರಿ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿರುವದಿಲ್ಲ.**

3) ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಮತ್ತು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಜಮೀನು ಸ್ವಾಧೀನಪಡಿಸಿಕೊಳ್ಳುವ ಪೂರ್ವದಲ್ಲಿ ನನಗೆ ನೋಟಿಸನ್ನು ನೀಡಿರುತ್ತಾರೆ ಎಂದರೆ ಸರಿ. ನೋಟಿಸ ಜಾರಿ ಮಾಡಿದ ನಂತರ ಅಧಿಕಾರಿಗಳು ಬಂದು ಜಂಟಿ ಸರ್ವೆ ಮಾಡಿರುತ್ತಾರೆ ಎಂದರೆ ಸರಿ. ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ಬಾಬಾನಗರ ಗ್ರಾಮಕ್ಕೆ ನಿಗದಿಮಾಡಿದ ಬೆಲೆಯನ್ನು ನಮಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

4) ಹೆಚ್ಚಿನ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿದ ದಿನಾಂಕ ನೆನಪಿಲ್ಲ. ಅರ್ಜಿಯನ್ನು ನಾನು ಸರಿಯಾದ ಸಮಯದಲ್ಲಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

5) ನನ್ನ ಜಮೀನು ಸಂಪೂರ್ಣ ಒಣಬೇಸಾಯದ ಜಮೀನು ಎಂದರೆ ಸರಿಯಲ್ಲ. ನನ್ನ ಜಮೀನು ನೀರಾವರಿ ಜಮೀನು ಇರುತ್ತದೆ. ಎದುರುದಾರರು ನನ್ನ ಜಮಿನೀಗೆ ನೀರಾವರಿ ದರ ನೀಡಿರುತ್ತಾರೆ.

6) ನನ್ನ ಜಮೀನಿನಲ್ಲಿ 335 ದ್ರಾಕ್ಷಿ ಗಿಡಗಳು ಇದ್ದ ಬಗ್ಗೆ ತೋಟಗಾರಿಕೆ ಇಲಾಖೆಯವರು ಬಂದು ಪರಿಶೀಲನೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ತೋಟಗಾರಿಕೆ ಇಲಾಖಲೆಯವರು ನಮ್ಮ ಜಮೀನಿಗೆ ದ್ರಾಕ್ಷಿ ಬೆಳೆಯನ್ನು ಪರಿಶೀಲಿಸಿ ಅವುಗಳು ಎಷ್ಟು ವಯಸ್ಸಿನ ಗಿಡಗಳು ಆಗಿದ್ದವು, ಯಾವ ತಳಿಯ ಗಿಡಗಳಾಗಿದ್ದವು ಮತ್ತು ಆ ಸಮಯಕ್ಕೆ ಎಷ್ಟು ಇಳುವರಿಯನ್ನು ನೀಡುತ್ತಿದ್ದವು ಎಂಬುದರ ಬಗ್ಗೆ ಪರಿಶೀಲಿಸಿ ವರದಿ ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಎದುರುದಾರರು ನನ್ನ ಜಮೀನದಲ್ಲಿದ್ದ ದ್ರಾಕ್ಷಿ ಬೆಳೆಗಳಿಗೆ ಸೂಕ್ತ ಪರಿಹಾರ ನೀಡಿಲ್ಲ ಎಂದು ಹೇಳುತ್ತಾರೆ. ಎದುರುದಾರರಿಗಾಗಲೀ ಅಥವಾ ತೋಟಗಾರಿಕಾ ಇಲಾಖೆಯವರಿಗಾಗಲೀ ನಮ್ಮ ಜಮೀನದಲ್ಲಿದ್ದ ದ್ರಾಕ್ಷಿ ಬೆಳೆಗಳಿಗೆ ಇಂತಿಷ್ಟು ಮಾರುಕಟ್ಟೆ ಬೆಲೆ ಇರುತ್ತದೆ ಎಂಬುದರ ಕುರಿತಂತೆ ನಾನು ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ. ನನ್ನ ಜಮೀನದಲ್ಲಿದ್ದ ದ್ರಾಕ್ಷಿ ಗಿಡಗಳು ಮೂರು ವರ್ಷ ವಯಸ್ಸಿನ ಗಿಡಗಳಾಗಿದ್ದವು ಎಂಬುದರ ಕುರಿತಂತೆ ನಾನು ಯಾವುದೇ ಪರಿಣಿತರನ್ನು ಕರೆಸಿ ಮೌಲ್ಯಮಾಪತನ ಮಾಡಿಸಿರುವುದಿಲ್ಲ. ನನ್ನ ಜಮೀನದಲ್ಲಿದ್ದ ದ್ರಾಕ್ಷಿ ಗಿಡಗಳು ಕೇವಲ ಸಸಿಗಳು ಆಗಿದ್ದವು ಎಂದರೆ ಸರಿಯಲ್ಲ. ದ್ರಾಕ್ಷಿ ಬೆಳೆಗಳಿಗೆ ಸಂಬಂಧಿಸಿದ ಮಾರಾಟ ಮಾಡಿದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

7) ನನ್ನ ಜಮೀನದಲ್ಲಿ ಒಂದು ಕೃಷಿ ಹೊಂಡ ಇರುತ್ತದೆ ಎಂದು ನಾನು ಹೇಳಿದ್ದು, ಅದು 75X75 ಅಡಿ ಅಷ್ಟು ಇರುತ್ತದೆ. ಸದರಿ ಕೃಷಿ ಹೊಂಡಕ್ಕೆ ಎದುರುದಾರರು ಸರಿಯಾದ ಪರಿಹಾರ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಕೃಷಿ ಹೊಂಡಕ್ಕೆ ಹೆಚ್ಚಿನ ಮಾರುಕಟ್ಟೆ ಬೆಲೆ ಇರುತ್ತದೆ ಎಂದು ತೋರಿಸಲು ಹಾಗೂ ಅದು 75X75 ಅಡಿ ಅಷ್ಟು ಗಾತ್ರ ಹೊಂದಿರುತ್ತದೆ ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರುಡಿಸಿಲ್ಲ ಎಂದರೆ ಸರಿ.

8) ಬಾಬಾನಗರ ಇದು ಒಂದು ಸಣ್ಣ ಹಳ್ಳಿ ಎಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಪ್ಯಾರಾ ನಂ.4 ರಲ್ಲಿ ಹೇಳಿರುವ ಸಂಗತಿಗಳನ್ನು ಸಾಬೀತುಪಡಿಸಲು ಎ.ಪಿ.ಎಮ್.ಸಿಯಿಂದಾಗಲಿ ಅಥವಾ ಬೇರೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ.

9) ಬಾಬಾನಗರ ಗ್ರಾಮದಲ್ಲಿ 2015 ರಿಂದ 2017 ರ ಅವಧಿಯಲ್ಲಿ ಸಾಕಷ್ಟು ಜಮೀನುಗಳು ಖರೀದಿ ಆಗಿರುತ್ತವೆ ಎಂದರೆ ಸರಿ. ತಿಕೋಟಾ ಇದು ತಾಲೂಕಾ ಕೇಂದ್ರ ಎಂದರೆ ಸರಿ. ನಿ.ಪಿ.2 ರಿಂದ 6 ಬಾಬಾನಗರ, ತಿಕೋಟಾ ಹಾಗೂ ಕನಮಡಿ ಗ್ರಾಮಗಳ ಖರೀದಿ ಪತ್ರಗಳು ಇದ್ದು, ಸದರಿ ಖರೀದಿ ಪತ್ರಗಳು ಯಾರಿಗೆ ಸಂಬಂಧಪಟ್ಟಿದ್ದು, ಯಾವ ಉದ್ದೇಶಕ್ಕೆ ಖರೀದಿ ಆಗಿರುತ್ತದೆ, ಎಷ್ಟು ಬೆಲೆಗೆ ಖರೀದಿಸಿರುತ್ತಾರೆ ಮತ್ತು ಸರ್ವೆ ನಂಬರ ಹೇಳಲು ಬರುವುದಿಲ್ಲ. ನಾನು ಹಾಜರುಪಡಿಸಿದ ನಿ.ಪಿ.2 ರಿಂದ 6 ಖರೀದಿ ಪತ್ರಗಳ ಜಮೀನುಗಳಿಗೂ ಮತ್ತು ನನ್ನ ಜಮೀನಿಗೂ ಇಂತಿಷ್ಟೇ ಅಂತರ ಇರುತ್ತದೆ ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ವಿಜಯಪುರ ತಾಲೂಕಾ ನಕಾಶೆಯನ್ನು ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ. ತಿಕೋಟಾ ಗ್ರಾಮದ ಖರೀದಿ ಪತ್ರದ ಜಮೀನಿಗೂ ಮತ್ತು ನನ್ನ ಜಮೀನಿಗೂ ಕನಿಷ್ಠ 10 ಕಿ.ಮೀ ಅಂತರ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 7 ಕಿ.ಮೀ ಅಂತರ ಇದೆ ಎಂದು ಸ್ವತಃ ಹೇಳುತ್ತಾರೆ. ನಾನು ಹಾಜರುಪಡಿಸಿದ ಬಾಬಾನಗರ ಗ್ರಾಮದ ಖರೀದಿ ಪತ್ರವನ್ನು ಕೃಷಿ ಉದ್ದೇಶಕ್ಕಾಗಿ ಖರೀದಿಪಡಿಸಿಕೊಂಡಿರುತ್ತಾರೆ, ಅದು ಯಾರಿಂದ ಯಾರಿಗೆ ಮತ್ತು ಎಷ್ಟು ಬೆಲೆಗೆ ಖರೀದಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿದ ನಿ.ಪಿ.2 ಖರೀದಿ ಪತ್ರದ ಜಮೀನನ್ನು ವಾಣಿಜ್ಯ ಉದ್ದೇಶಕ್ಕಾಗಿ ಖರೀದಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಿ.ಪಿ.3 ರಿಂದ 5 ತಿಕೋಟಾ ಗ್ರಾಮದ ಖರೀದಿ ಪತ್ರದ ಜಮೀನುಗಳು ತಿಕೋಟಾ ಪಟ್ಟಣಕ್ಕೆ ಹೊಂದಿಕೊಂಡಂತೆ ಇರುತ್ತವೆ ಎಂದರೆ ಸರಿ. ಬಾಬಾನಗರ ಆದ ನಂತರ ಬಿಜ್ಜರಗಿ ಗ್ರಾಮದ ಜಮೀನುಗಳು ಇರುತ್ತವೆ ಎಂದರೆ ಸರಿ. ಬಿಜ್ಜರಗಿ ಆದ ನಂತರ ಕನಮಡಿ ಗ್ರಾಮದ ಜಮೀನುಗಳು ಇರುತ್ತವೆ ಎಂದರೆ ಸರಿ. ಕನಮಡಿ ಗ್ರಾಮದ ಖರೀದಿ ಪತ್ರದ ಜಮೀನಿಗೂ ಮತ್ತು ನನ್ನ ಜಮೀನಿಗೂ ಕನಿಷ್ಠ 18 ಕಿ.ಮೀ ಅಂತರ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 8 ಕಿ.ಮೀ ಅಂತರ ಇದೆ ಎಂದು ಸ್ವತಃ ಹೇಳುತ್ತಾರೆ. ನಾನು ಹಾಜರುಪಡಿಸಿದ ನಿ.ಪಿ.7 ರ ಜಮೀನು ನನ್ನ ಜಮೀನಿನಿಂದ ಅಂದಾಜು 30 ಕಿ.ಮೀ ದೂರ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 10 ಕಿ.ಮೀ ಇರುತ್ತದೆ ಎಂದು ಹೇಳುತ್ತಾರೆ. ನಿ.ಪಿ.7 ರ ಜಮೀನಿಗೂ ಹಾಗೂ ನನ್ನ ಜಮೀನಿಗೂ ಯಾವುದೇ ಸಾಮ್ಯತೆ ಇರುವುದಿಲ್ಲ ಎಂದರೆ

ಸರಿಯಲ್ಲ.

10) ನಾನು ಒಂದು ಎಕರೆಗೆ 1 ಕೋಟಿ ಪರಿಹಾರ ಕೇಳಿದ್ದು, ಅದಕ್ಕೆ ಸೂಕ್ತ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನಿಗೆ ಸರ್ಕಾರ ಸೂಕ್ತವಾದ ಬೆಲೆ ಕೊಟ್ಟಿದ್ದರು ಸಹ ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: DGP., ಇವರಿಂದ 1 ಮತ್ತು 3 ನೇ ಎದುರುದಾರರ ಪರವಾಗಿ:**

2 ನೇ ಎದುರುದಾರರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

3 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ವಿಜಯಪುರ.